<u>ದಿನಾಂಕಃ **18-07-2024** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>

<u>ಮುಂದುವರೆದ ಪಾಟೀ ಸವಾಲುಃ- ವಾದಿ ಪರ ಶ್ರೀ ಜಿ ಕೆ ವಕೀಲರಿಂದಃ-</u>

1) ನಮ್ಮ ಖಾನೇಷುಮಾರಿ ನಂ 240/ಪಿ ಮತ್ತು 243 ಅಂದರೆ ಸರಿ. ಸದರಿ ಆಸ್ತಿಯು ನನ್ನ ಅಕ್ಕ 1 ನೇ ಪ್ರತಿವಾದಿಗೆ ಸೇರಿದ್ದು ಅಂದರೆ ಸರಿ. ಸದರಿ ಆಸ್ತಿಯ ಉತ್ತರ ದಿಕ್ಕಿಗೆ ಒಂದು ರಸ್ತೆ ಇದೆ ಅಂದರೆ ಸರಿ. ನನ್ನ ಅಕ್ಕನ ಆಸ್ತಿಯ ಪೂರ್ವಕ್ಕೆ ವಾದಿಯರ ಆಸ್ತಿ ಬರುತ್ತದೆ ಅಂದರೆ ಸರಿಯಲ್ಲ. ನನ್ನ ಪ್ರಕಾರ ಚಿಂಚಿಣಿ ಹನುಮಂತಪ್ಪನ ಆಸ್ತಿಯು ನನ್ನ ಅಕ್ಕನ ಆಸ್ತಿಯ ಪೂರ್ವಕ್ಕೆ ಬರುತ್ತದೆ. ಚಿಂಚಿಣಿ ಹನುಮಂತಪ್ಪನ ಆಸ್ತಿಯ ಚಕ್ಕುಬಂದಿ ಹೇಳಲು ಬರುವುದಿಲ್ಲ. ಚಿಂಚಿಣಿ ಹನುಮಂತಪ್ಪ ಮತ್ತು 2 ನೇ ವಾದಿ ಅಣ್ಣ ತಮ್ಮ ಅಂದರೆ ನನಗೆ ಗೊತ್ತಿಲ್ಲ. ಚಿಂಚಿಣಿ ಹನುಮಂತಪ್ಪನ ಬಗ್ಗೆ ನನಗೆ ಗೊತ್ತಿಲ್ಲ.

2) ವಾದಿಯರ ಸ್ವತ್ತಿನ ಉತ್ತರದ ಪಶ್ಚಿಮ ದಿಕ್ಕಿಗೆ ನಮ್ಮ ಆಸ್ತಿ ಇರುತ್ತದೆ ಅಂದರೆ ಸರಿ. ವಾದಿಯರ ಪೂರ್ವ ದಿಕ್ಕಿಗೆ ಚಿಂಚಿಣಿ ಹನುಮಂತಪ್ಪನ ಆಸ್ತಿ ಬರುತ್ತದೆ ಅಂದರೆ ಸರಿ. ನಮ್ಮ ಅಕ್ಕನ ಆಸ್ತಿಯ ಉತ್ತರ ದಿಕ್ಕಿಗೆ ಇರುವ ರಸ್ತೆಯು ಮುಂದುವರೆದಿದೆ ಅಂದರೆ ಸರಿಯಲ್ಲ. ಚಿಂಚಿಣಿ ಹನುಮಂತಪ್ಪನ ಉತ್ತರ ದಿಕ್ಕಿಗೆ ರಸ್ತೆ ಇರುತ್ತದೆ ಅಂದರೆ ನನಗೆ ಗೊತ್ತಿಲ್ಲ. ಕಲ್ಲೇಶಪ್ಪನ ಸ್ವತ್ತಿನ ಕಡೆಗೆ ವಾದಿಯರ ಆಸ್ತಿಯ ದಕ್ಷಿಣ ದಿಕ್ಕಿನಲ್ಲಿ ವಾದಿಯರ ಆರ್ ಸಿ ಸಿ ಮನೆ ಇರುತ್ತದೆ ಅಂದರೆ ಸಾಕ್ಷಿ ಇತ್ತೀಚೆಗೆ ಕಟ್ಟಿರುತ್ತಾರೆ ಎಂದು ಹೇಳುತ್ತಾರೆ. ಸದರಿ ಆರ್ ಸಿ ಸಿ ಮನೆ ಹಿಂದುಗಡೆ ವಾರಚಾಟ್ ಕಟ್ಟಿದ್ದಾರೆ ಅಂದರೆ ಸರಿಯಲ್ಲ. ಸದರಿ ವಾರಚಾಟ್ ನಲ್ಲಿ ವಾದಿಯರು ದನ



ಕರುಗಳನ್ನು ಕಟ್ಟುತ್ತಾರೆ ಅಂದರೆ ಸರಿಯಲ್ಲ. ವಾದಿಯರು ತಮ್ಮ ಹಿಂದಿನ ಜಾಗದ ಉತ್ತರ ದಿಕ್ಕಿನ ರಸ್ತೆಯಲ್ಲಿ ಓಡಾಡುತ್ತಾರೆ ಅಂದರೆ ಸರಿಯಲ್ಲ.

3) ಒ ಎಸ್ ನಂ 215/1994 ರಲ್ಲಿ ನಿಮ್ಮ ಆಸ್ತಿಗೆ ಯಾವ ಚಕ್ಕುಬಂದಿ ನೀಡಿದ್ದೀರಿ ಅಂದರೆ ಗೊತ್ತಿಲ್ಲ. ಈ ದಾವೆ ಬಗ್ಗೆ ನನಗೆ ವೈಯಕ್ತಿಕವಾಗಿ ಸಂಪೂರ್ಣ ಮಾಹಿತಿ ಇಲ್ಲ ಅಂದರೆ ಸರಿಯಲ್ಲ. ನನಗೆ ವೈಯಕ್ತಿಕ ಮಾಹಿತಿ ಇಲ್ಲದೇ ಇದ್ದರೂ ಸಹ ನಾನು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆ ಬೆರಳಚ್ಚು ಮಾಡಲಾಯಿತು. )

ಓ.ಹೇ.ಕೇ.ಸರಿ.ಇದೆ.

2 ನೇ ಹೆಚ್ಚುವರಿ ವ್ಯವಹಾರ ನ್ಯಾಯಾಧೀಶರು ಮತ್ತು
ಜೆ .ಎಂ.ಎಫ್.ಸಿ.
ಶಿಕಾರಿಪುರ.

<u>ಪ್ರತಿವಾದಿಗಳು ಮತ್ತು ಪ್ರತಿವಾದಿ ಪರ ವಕೀಲರುಗೈರು ಹಾಜರಿದ್ದು ಪಾಟೀ ಸವಾಲು ಮುಂದೂಡಲು ಯಾವುದೇ ಸಕಾರಣ ಇಲ್ಲದೇ ಇರುವುದರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.</u>